# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ–264/2008/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 12/12/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: 2003–04 ಮತ್ತು 2004–05ನೇ ಸಾಲಿನ ಜಲಾಲಪುರ ಗ್ರಾಮದ ಕಾಮಗಾರಿಗಳ ಬಗ್ಗೆ ಹಣ ದುರುಪಯೋಗವಾಗಿದ್ದು ಲೆಕ್ಕ ಪರಿಶೋಧಕರ ವರದಿಯ ಆಕ್ಷೇಪಣೆಯಂತೆ 2ನೇ ಮತ್ತು 3ನೇ ಎದುರುದಾರರಿಂದ ದುರುಪಯೋಗ ಮಾಡಿದ ಹಣ ರೂ.54,132/– ಗಳನ್ನು ವಸೂಲು ಮಾಡುವ ಬಗ್ಗೆ.,

*****

ಶ್ರೀ ನಾಮದೇವ ದಶರಥ ಕಾಂಬಳೆ, ಜಲಾಲಪುರ ವಾಸಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಶ್ರೀ ಆವಟೆ ಎಸ್.ಡಿ. ಕಾರ್ಯದರ್ಶಿ, ಭಿರಡಿ ಗ್ರಾಮ ಪಂಚಾಯತ್, ಭಿರಡಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ತನಿಖಾ ಅವಧಿಯಲ್ಲಿ (2) ಶ್ರೀ ಎಸ್.ಎಸ್.ಕರಿಹೋಳಿ, ಕಾರ್ಯದರ್ಶಿ, ಭಿರಡಿ ಗ್ರಾಮ ಪಂಚಾಯತಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು, (3) ಶ್ರೀಮತಿ ಮಾಲಾ ರಾಯಪ್ಪ ನೀಡವಾಣಿ, ಅಧ್ಯಕ್ಷರು, ಭಿರಡಿ ಗ್ರಾಮ ಪಂಚಾಯತ್, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು 2 ಮತ್ತು 3' ಎಂದು ಕರೆಯಲ್ಪಡುತ್ತಾರೆ) ಸದರಿ ದೂರು ಮತ್ತು ಲಗತ್ತು ದಾಖಲೆಗಳ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಜಲಾಲಪುರ ಗ್ರಾಮದ ಹರಿಜನ ಕಾಲೋನಿಯಲ್ಲಿರುವ ರಸ್ತೆ ಮತ್ತು ಗಟಾರವನ್ನು ಕಟ್ಟಿಸುವ ಕಾಲದಲ್ಲಿ ಕನ್ನಡ ಮತ್ತು ಮರಾಟಿ ಶಾಲೆಯಲ್ಲಿ ಅಡಿಗೆ ಕೋಣೆ ನಿರ್ಮಿಸುವ ಕಾರ್ಯದಲ್ಲಿ ಮತ್ತು ಭಿರಡಿ ಗ್ರಾಮದ ಸ್ಮಶಾನದಲ್ಲಿ ಸಿಮೆಂಟ್ ಮತ್ತು ಸ್ಟೀಲ್

ಉಪಯೋಗಿಸಿ ಕೈಗೊಂಡಿದ್ದ ಕಾಮಗಾರಿಗಳಲ್ಲಿ ಅವ್ಯವಹಾರ ಎಸಗಿ ಸರ್ಕಾರದ ಹಣದ ದುರುಪಯೋಗ ಮಾಡಿ ಸರ್ಕಾರಕ್ಕೆ ಎದುರುದಾರರು ನಷ್ಟವನ್ನುಂಟು ಮಾಡಿದ್ದಾರೆಂದು ದೂರು ಸಲ್ಲಿಸಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆ:-

2003-04 ಮತ್ತು 2004-05ನೇ ಇಸ್ವಿಯಲ್ಲಿ ಭಿರಡಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿಲ್ಲವೆಂದು, ಆ ಸಮಯದಲ್ಲಿ ಶ್ರೀ ಎಸ್.ಎಸ್.ಕರಿಹೋಳಿ ಇವರು ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿರುತ್ತಾರೆಂದು, ಆದ್ದರಿಂದ, ದೂರಿರುವ ಕಾಮಗಾರಿಗಳು ಸದರಿಯವರಿಗೆ ಸಂಬಂಧಿಸಿದ್ದಾಗಿದೆ ಎಂದು, ಆದರೂ ಕೂಡ ದೂರುದಾರರು ದೂರಿರುವ ಕಾಮಗಾರಿಗಳು ಸಂಪೂರ್ಣಗೊಂಡಿದ್ದು, ಅದರಲ್ಲಿ ಯಾವುದೇ ಅವ್ಯವಹಾರಗಳು ಕಂಡುಬಂದಿಲ್ಲವೆಂದು ತಿಳಿಸಿರುತ್ತಾರೆ.

4. ಪಿರ್ಯಾದುದಾರರ ಪ್ರತ್ಯುತ್ತರ:

ಜಲಾಲಪುರ ಗ್ರಾಮದ ಮಾದರಿಕೇರಿ ಸಮಾಜ ಮಂದಿರ ರಿಪೇರಿ ವೆಚ್ಚ ರೂ.38,146/- ಎಂದು ತೋರಿಸಿರುತ್ತಾರೆ. ಆದರೆ, ಭಿರಡಿ ಗ್ರಾಮ ಪಂಚಾಯತಿಯಲ್ಲಿ ಗುಮಾಸ್ತರು "ಆಶ್ರಯ ಯೋಜನೆ" ಚೆಕ್ಕುಗಳನ್ನು ಹಾಗೂ ಕಾಗದ ಪತ್ರಗಳನ್ನು ನೀಡಲು ಲಂಚ ಕೇಳುತ್ತಾರೆ ಮತ್ತು ಪರವಾನಿಗೆ ಫೀ ಎಂದು ರೂ.500/- ರಿಂದ ರೂ.700/- ರವರೆಗೆ ವಸೂಲು ಮಾಡುತ್ತಾರೆ. ಆದರೆ ರೂ.150ಕ್ಕೆ ಮಾತ್ರ ರಸೀತಿ ನೀಡಿರುತ್ತಾರೆ. ಆಶ್ರಯ ಯೋಜನೆಯಡಿಯಲ್ಲಿ ಚೆಕ್ಕುಗಳನ್ನು ನೀಡಲು ವಿಳಂಬ ನೀತಿ ಅನುಸರಿಸಿ ರೂ.100/- ರಿಂದ ರೂ.200/- ವಸೂಲು ಮಾಡುತ್ತಾರೆಂದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

5. ಈ ಹಂತಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಬೆಳಗಾವಿ ಪೊಲೀಸ್ ರವರಿಂದ 2003-04 ಮತ್ತು 2004-05 ರ ಸಾಲಿನಲ್ಲಿ ಭಿರಡಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸಿದ್ದ ಕಾರ್ಯದರ್ಶಿ ಮತ್ತು ಅಧ್ಯಕ್ಷರ ಹೆಸರು ಮತ್ತು ವಿಳಾಸವನ್ನು ನೀಡುವಂತೆ ಕೋರಲಾಗಿದ್ದು. 2ನೇ ಮತ್ತು 3ನೇ ಎದುರುದಾರರ ಹೆಸರು ಮತ್ತು ವಿಳಾಸವನ್ನು ನೀಡಿರುತ್ತಾರೆ.

6. 3ನೇ ಎದುರುದಾರರ ಆಕ್ಷೇಪಣೆಗಳು:

ಭಿರಡಿ ಗ್ರಾ.ಪಂ.ಯ 2003–04 ಮತ್ತು 04–05ರ ಕಾಮಗಾರಿಗಳ ಬಗ್ಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆ ನಡೆಸಿ ವರದಿ ಸಲ್ಲಿಸಿದ್ದು ಅದರಂತೆ ತಮ್ಮ ಮೇಲೆ ಸಿ.ಸಿ.592/2006, 594/2006 ಮತ್ತು 599/2006ರ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿರುತ್ತಾರೆಂದು, ಆದ್ದರಿಂದ ಸದರಿ ಕ್ರಿಮಿನಲ್ ಪ್ರಕರಣಗಳಲ್ಲಿ ಅಂತಿಮ ಆದೇಶವಾಗುವವರೆಗೂ ಪ್ರಸಕ್ತ ಪ್ರಕರಣದ ಪ್ರಕ್ರಿಯೆಯನ್ನು ತಡೆಹಿಡಿದಿರಬೇಕೆಂದು ಕೋರಿರುತ್ತಾರೆ. 2ನೇ ಎದುರುದಾರರಿಗೆ ಈ ಸಂಸ್ಥೆಯ ಪತ್ರ ತಲುಪಿದ್ದರೂ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

7. ಎದುರುದಾರರ ವಿರುದ್ಧ ಲೆಕ್ಕ ಪರಿಶೋಧಕರ ವರದಿ ಇದ್ದು ಸದರಿ ವರದಿಯಲ್ಲಿ 2 ಮತ್ತು 3ನೇ ಎದುರುದಾರರು ದಾಖಲೆಗಳನ್ನು ಹಾಜರುಪಡಿಸದೇ ಇರುವ ಕಾರಣ ಆಕ್ಷೇಪಣೆಗೆ ಒಳಪಟ್ಟಿರುವ ರೂ.54,132/– ಅನ್ನು ವಸೂಲು ಮಾಡಬೇಕೆಂದು ತಿಳಿಸಿರುವುದರಿಂದ ಹಾಗೂ 2ನೇ ಮತ್ತು 3ನೇ ಎದುರುದಾರರು ಲೆಕ್ಕ ಪರಿಶೋಧಕರ ಪರಿಶೀಲನಾ ಟಿಪ್ಪಣಿಗೆ ಯಾವುದೇ ಉತ್ತರವನ್ನು ಸಲ್ಲಿಸದೇ ಇರುವ ಕಾರಣ 2ನೇ ಮತ್ತು 3ನೇ ಎದುರುದಾರರು ಲೆಕ್ಕ ಪರಿಶೋಧಕರ ವರದಿಯಲ್ಲಿ ತಿಳಿಸಿರುವಂತೆ ರೂ.54.132/– ಅನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಕಂಡುಬರುತ್ತದೆ (ಇದಲ್ಲದೆ ಕಾರ್ಯನಿರ್ವಹಣಾಧಿಕಾರಿಗಳು, ತಾಲೂಕು ಪಂಚಾಯತಿ, ರಾಯಬಾಗ್ ಇವರು ನೀಡಿರುವ ಮಾಹಿತಿಯ ಪ್ರಕಾರ ಸದರಿ ದಾಖಲೆಗಳು 2005ರಲ್ಲಿ ಉಂಟಾದ ಪ್ರವಾಹದಲ್ಲಿ ಹಾಳಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ, ಈ ಬಗ್ಗೆ 2ನೇ ಎದುರುದಾರರು ಏನನ್ನು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವುದಿಲ್ಲ).

8. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳಿಂದ, 2003–04 ಮತ್ತು 2004–05ನೇ ಸಾಲಿನ ಜಲಾಲಪುರ ಗ್ರಾಮದ ಕಾಮಗಾರಿಗಳ ಬಗ್ಗೆ ಹಣ ದುರುಪಯೋಗವಾಗಿದ್ದು ಲೆಕ್ಕ ಪರಿಶೋಧಕರ ವರದಿಯ ಆಕ್ಷೇಪಣೆಯಂತೆ 2ನೇ ಮತ್ತು 3ನೇ ಎದುರುದಾರರಿಂದ ದುರುಪಯೋಗ ಮಾಡಿದ ಹಣ ರೂ.54,132/– ಗಳನ್ನು ವಸೂಲು ಮಾಡುವ ಬಗ್ಗೆ ಅಗತ್ಯ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 12/12

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**